ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಲಯ,
ಕನಕಪುರ.

<u>ಸಿ. ಸಿ. ಃ **181/2021**</u>

<u>ದೋಷರೋಪಣೆ</u>

ಕು. ಪಾರ್ವತಿ, ಬಿ.ಎ.ಎಲ್, ಎಲ್.ಎಲ್.ಬಿ. ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು,ಕನಕಪುರ , ಆದ ನಾನು ಈ ಕೆಳಗಿನ ಆರೋಪಿತರಾದ

1. ಬಸವರಾಜು ಬಿ
   ಬಿನ್ ಲೇಟ್ ಬಸಪ್ಪ
   ವಯಸ್ಸು 57 ವರ್ಷಗಳು,

2. ಕಿರಣ್ ಬಿನ್ ಬಸವರಾಜು
   ವಯಸ್ಸು 22 ವರ್ಷಗಳು,

3. ಜಯಶ್ರೀ ಕೋಂ ಬಸವರಾಜು
   ವಯಸ್ಸು 42 ವರ್ಷಗಳು,

ಮೇಲ್ಕಂಡ ಆರೋಪಿತರ ವಾಸಃ
ಕಬ್ಬಾಳು ಗ್ರಾಮ
ಸಾತನೂರು ಹೋಬಳಿ
ಕನಕಪುರ ತಾಲ್ಲೂಕು

**ಎಂಬ ನಿಮ್ಮಗಳ ಮೇಲೆ ಹೊರೆಸುವ ದೋಷಾರೋಪವೇನೆಂದರೆಃ-**

ದಿನಾಂಕ.07.12.2020 ರಂದು ಬೆಳಿಗ್ಗೆ ಸುಮಾರು 7ಃ00 ಗಂಟೆ ಸಮಯದಲ್ಲಿ ಸಾತನೂರು ಪೊಲೀಸ್ ಠಾಣಾ ವ್ಯಾಪ್ತಿಯ ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಂಸಾಗರ ಗ್ರಾಮದ ಸರ್ವೆ ನಂ.34/1 ರ ಜಮೀನಿನಲ್ಲಿ ರೇಷ್ಮೆ ಕಡ್ಡಿಗೆ ನೀರು ಹಾಯಿಸಲು ಚಾಸಾ-1 ಮಹದೇವ, ಚಾಸಾ-2 ಮಹೇಶ, ಚಾಸಾ-3 ಶಿವಲಿಂಗ ಮತ್ತು ಚಾಸಾ-4 ಪ್ರತಾಪ್ ರವರು ಬಂದಾಗ 1 ರಿಂದ 3 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಬೋರ್ವೆಲ್ ನಮಗೆ ಸೇರಬೇಕೆಂದು ಹಾಗೂ ಜಮೀನು ಭಾಗದ ವಿಚಾರವಾಗಿ ಚಾಸಾ-1 ಮತ್ತು 2 ರವರನ್ನು ಜಮೀನಿನಲ್ಲಿ ಅಡ್ಡಗಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ರಿಂದ 3 ನೇ ಆರೋಪಿಗಳಾದ ನೀವುಗಳು ಚಾಸಾ-1 ಮತ್ತು 2 ರವರಿಗೆ ಅವಾಚ್ಯ ಶಬ್ಧಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.504 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀವು ದೊಣ್ಣೆಯಿಂದ ಚಾಸಾ-1 ರವರ ಬೆನ್ನಿನ ಮೇಲೆ ಹೊಡೆದು ಸಾದಾರಣ ಸ್ವರೂಪದ ನೋವುಂಟು ಮಾಡಿದ್ದು ಹಾಗೂ 2 ನೇ ಆರೋಪಿಯಾದ ನೀವು ಅದೇ ದೊಣ್ಣೆಯಿಂದ ಚಾಸಾ-2 ರವರ ಬಲಗೈಗೆ ಹೊಡೆದು ಸಾದಾರಣ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.324 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಸಮಾನ ಉದ್ದೇಶದಿಂದ 1 ರಿಂದ 3 ನೇ ಆರೋಪಿಗಳಾದ ನೀವುಗಳು ಚಾಸಾ-1 ಮತ್ತು 2 ರವರಿಗೆ ಪ್ರಾಣ ಬೆದರಿಕೆಯನ್ನು ಹಾಕುವ ಮೂಲಕ ಭಾರತ ದಂಡ ಸಂಹಿತೆ ಕಲಂ.506 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧ ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೇಲಿನ ಆಪಾದನೆಯು ಈ ನ್ಯಾಯಾಲಯದ ಸಂಜ್ಞೆದೊಳಗೆ ಬರುತ್ತಿದ್ದು, ಆ ಕಾರಣ ನಿಮ್ಮನ್ನು ಮೇಲ್ಕಂಡ ಆಪಾದನಾ ವಿಚಾರಣೆಗೆ ಗುರುಪಡಿಸಿದ್ದೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಕನಕಪುರ ರವರ ನ್ಯಾಯಾಲಯ, ಕನಕಪುರ.
ಸಿ.ಸಿ. ನಂ.181/2021

ಸಾತನೂರು ಪೊಲೀಸ್ ಠಾಣೆ ವಿರುದ್ಧ 1. ಬಸವರಾಜು ಬಿ
ಬಿನ್ ಲೇಟ್ ಬಸಪ್ಪ
ವಯಸ್ಸು 57 ವರ್ಷಗಳು,

2. ಕಿರಣ್ ಬಿನ್ ಬಸವರಾಜು
ವಯಸ್ಸು 22 ವರ್ಷಗಳು,

3. ಜಯಶ್ರೀ ಕೋಂ ಬಸವರಾಜು
ವಯಸ್ಸು 42 ವರ್ಷಗಳು,

:: ಆಪಾದನೆ ::

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಮೂರನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ

ಆರೋಪಿತರ ಸಹಿ

1.

2.

3.